ಪೂರಕವಾಗಿರುವುದರಿಂದ, ತಪಸ್ಸು, ಅತ್ತೆಸೊಸೆಯರ ತಾಳಕ್ಕೆ ತಕ್ಕುದಾಗಿ ಕುಣಿಯುವ ಗೊಂಬೆಯೇ ಆಗಿಬಿಟ್ಟನೇನೋ! ವೃತ್ತಿಪ್ರವೃತ್ತಿಗಳಿಂದ ಸದಾ ಕಂಪ್ಯೂಟರೆದುರು ಕುಕ್ಕರಿಸುವ ನಾನು ದೇವರುದಿಂಡರುಗಳನ್ನು ಸದಾ ದೂರವಿಟ್ಟವನೇ ಹೌದು. ನನ್ನ ಅಮ್ಮನ ಮಟ್ಟಿಗೆ ನಾನು ನಾಸ್ತಿಕನಷ್ಟೇ ಅಲ್ಲ, ಮಹಾ ಮಹಾ ಅಬ್ರಾಹ್ಮಣ ಕೂಡ! ಹೆಂಡತಿಯ ಪಾಲಿಗೆ ಕಡು ಲೌಕಿಕ!! ಇನ್ನು, ನಾನು ಆಗಿಕೊಂಡಿರುವ ಕಾಲವಾದರೂ ದೇವರೆಂಬ ದೇವರನ್ನೇ ಶಂಕಿಸಿ ತನಿಖಿಸುವಂಥದ್ದು! ಆ ಅರ್ಥದಲ್ಲಿ ಪರಮ ಸೆಕ್ಯುಲರು ನಾನು!! ಹೀಗಾಗಿಯೇ, ನಾನು ಮನೆಯವರೆಲ್ಲರಿಂದ ಸದಾ ಹೊರತಾಗಿಯೇ ಇದ್ದು, ನನ್ನೊಬ್ಬನದೇ ಒಂದು ಗುಂಪು; ಅವರದೇ ಅಂದರೆ 'ಅವರಿಬ್ಬರದೇ' ಇನ್ನೊಂದು. ನನ್ನ ಗುಂಪಿನ ಮುಂದಾಳೂ ನಾನೇ, ಹಿಂದಿದ್ದು ಕಾಯುವ ಪದಾತಿಯೂ ನಾನೇ! ಹೇಗಿದೆ ವರಸೆ?!

ಬಲು ವಿಚಿತ್ರವೆಂದರೆ, ಚಿಕ್ಕ ವಯಸ್ಸಿನ ತಪಸ್ಸು ಎಂಬತ್ತು ವಯಸ್ಸಿನ ನನ್ನ ಅಮ್ಮನ ಸಮಾ ಉಪವಾಸ ಕೈಕೊಳ್ಳುವನು. ಸೋಮವಾರ, ಶನಿವಾರಗಳಂದು ಒಪ್ಪೊತ್ತು ಮಾಡುವನು. ಸಂಕಷ್ಟಿ ಮತ್ತು ಷಷ್ಠಿಗಳಂದು ನಿಟ್ಟುಪವಾಸಗೈವನು. ಏಕಾದಶಿಯಂದೂ ಇಂಥದೇ ಇನ್ನೊಂದು ಮರಿಯುಪವಾಸ. ನಾಗರಪಂಚಮಿ ಬಂದರೆ, ತದಿಗೆಯ ಸಂಜೆಯಿಂದ ಸಿರಿಯಾಳಷಷ್ಠಿ ತೀರುವವರೆಗೆ ಮೂರೂವರೆ ದಿವಸಗಳ ಕಟ್ಟುಪವಾಸ! ಸಣಕಲುಮೈಯ ಕೊಯಕಲು ಕಡ್ಡಿಯಂತಿರುವ ಇವನು, ಈ ಪರಿ ನೇಮನಿಷ್ಠೆಯ ಸಲುವಾಗಿ ಅದೆಲ್ಲಿ ಶಕ್ತಿ ಸಂಪಾದಿಸುವನೋ ಯಾರಿಗೆ ಗೊತ್ತು? ಮೈಶಕುತಿಗೂ ಮಿಗಿಲಾದ ಮನೋಬಲವನ್ನೆಲ್ಲಿ ಶೇಖರಿಸುವನೋ, ಏನೋ, ಒಟ್ಟಾರೆ ಕಟು ಬ್ರಾಹ್ಮಣರ ಸಮಾ ಉಪವಾಸ ಗೈದುಗೈದು ಪುಣ್ಯ ಗಳಿಸುವನು!! ಇಂತಹ ಮನುಷ್ಯ, ನನ್ನ ಮನೆಯಲ್ಲಿನ ಎರಡು ಕರ್ಮಠಮಣಿಗಳಿಗೆ ಇಷ್ಟವಾಗದಿರಲಿಕ್ಕೆ ಹೇಗೆ ಸಾಧ್ಯ? ನನ್ನ ವಿರೋಧಪಕ್ಷದ ಸರಕಾರದಲ್ಲಿ ಶಾಸ್ತ್ರಸಂಪ್ರದಾಯದ ಮಸೂದೆ ಮಂಡಿಸುವ ಏಕೈಕ ಗಂಡು ತಾನೇ ಇವನು?! ಕರ್ಮ ಕರ್ಮ!! ಯೋಚಿಸಿದರೆ ಬೇಸರವಾಗುವುದು.

ಶುದ್ಧಿಶೌಚಕ್ಕೆ ಸಂಬಂಧಿಸಿದಂತೆ ನಾನು ಗಮನಿಸಿರುವ ಹಾಗೆ, ಇಡೀ ಭರತವರ್ಷವು ನೀರನ್ನೇ ನೆಚ್ಚಿಕೊಂಡಿದೆಯಷ್ಟೆ? ಎಷ್ಟು ಮಟ್ಟಿಗಂದರೆ ನೀರು ಹೊಯ್ದು ತೊಳೆದರಷ್ಟೇ ಶುದ್ಧಿ, ಅನ್ಯಥಾ ಇಲ್ಲವಂತೆಂಬ ಅಚಲ ನಂಬಿಕೆಯೊಂದು ನಮ್ಮಲ್ಲಿ ಬೇರೂರಿಬಿಟ್ಟಿದೆ! ಇಷ್ಟಕ್ಕು, ನೀರನ್ನು ಪಾವನಗಂಗೆ ಅಂತಲೇ ತಾನೇ ನಾವು ನಂಬುವುದು? ಯಾವುದೇ ನೀರಿಗೂ ಗಂಗೆಯನ್ನು ಆವಾಹಿಸಿ ತಾನೇ ನಮ್ಮ ಪೂಜಾವಿಧಿಗಳು ಜರುಗುವುದು? ಕೊಳಾಯಿನೀರನ್ನೂ ಚೆಂಬಿನಲ್ಲಿ ತುಂಬಿ, 'ಗಂಗೇಚ ಯಮುನೇಚೈವ ಗೋದಾವರಿ ಸರಸ್ವತೀ...' ಅಂತೆಲ್ಲ ಮಂತ್ರ ಪಿಟಿಪಿಟಿಸಿ, ನರ್ಮದಾ–ಸಿಂಧೂ–ಕಾವೇರಿಯರನ್ನೂ ಕಲ್ಪಿಸಿಕೊಂಡು, ಗಂಧಾದಿದ್ರವ್ಯ ಕದಡಿ, ಬಳಿಕ ಈ 'ಕಲಶೋದಕ'ವನ್ನು ಬಳಿಕ ಎಲ್ಲೆಲ್ಲೂ ನೀರು ಚಿಮುಕಿಸಿದರೆ ಮನೆಯೆಲ್ಲ ಶುಚಿ–ಶುಭ್ರಗೊಂಡೀತೆಂಬ ನಂಬುಗೆ ನಮ್ಮದು! ಇದನ್ನು ಉದಕಶಾಂತಿ ಅನ್ನಲಾಗುತ್ತದೆ. ಇದನ್ನು ಹೇಳುವ ಪುರೋಹಿತನಾಗಲಿ, ಕುರುಡಾಗಿ ಪಾಲಿಸುವ ನಾವಾಗಲಿ ನೀರೆಂಬ ನೀರೆ 'ಗಂಗೆ'ಯೆಂಬ ಕಲ್ಪನೆಯನ್ನು ಮೆಟಫರಿಕಲಾಗಿ ನೋಡುವುದೇ ಇಲ್ಲವೆ?! ಕೊಳಾಯಿಯ ನೀರು ಕಾವೇರಿಗೆ ಸಮವೇ ಹೊರತು ಖುದ್ದು ಕಾವೇರಿ ಅಲ್ಲವೆಂಬುದು ಅರ್ಥವಾಗುವುದೇ ಇಲ್ಲವೆ? ಒಂದು ಕಾಲಕ್ಕೆ ಎಲ್ಲಿಯೂ ನೆಲೆ ನಿಲ್ಲದೆ ಅಲೆಮಾರಿಯಾಗಿದ್ದ ಮನುಷ್ಯನು ಒಂದೆಡೆ ಮನೆ ಕಟ್ಟಿ ಊರಿಕೊಂಡಿದ್ದೇ, ಅಲ್ಲಲ್ಲಿನ ನೀರೇ ಗಂಗೆ–ಯಮುನೆಗಳೆಂದು ಬಗೆಯುವುದು ಸಾಹಿತ್ಯಿಕ ಔದಾರ್ಯವೆಂದೇ ನನ್ನ ಅನಿಸಿಕೆ. ತಾನೇರಿದ ಮಲೆ ಸಹ್ಯಾದ್ರಿ ಎಂದು ಕವಿ ಭ್ರಮಿಸುವ ಹಾಗೆ!